ದಿನಾಂಕ : 08.10.2021 ಓ.ಎಸ್ ನಂ.122/2017 ರಲ್ಲಿ
ಪಿ.ಡಬ್ಲ್ಯೂ-1(ಜಿ.ಎಲ್.ಆಂಜನೇಯ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಮಾನ್ಯ ಡಿ.ಜಿ.ಪಿ. ಯವರಿಂದಃ

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಇಂಗ್ಲೀಷ್ ಭಾಷೆಯಲ್ಲಿರುವುದನ್ನು ನನಗೆ ಯಾರಾದರೂ ಓದಿ ಹೇಳಿದರೆ ಅರ್ಥವಾಗುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಗಳಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನಾನು ನನ್ನ ಪ್ರಮಾಣಪತ್ರದಲ್ಲಿ 1,19,73,446/- ರೂಪಾಯಿ ಪ್ರತಿವಾದಿಗಳಿಂದ ಬರಬೇಕೆಂದು ಹೇಳಿದ್ದು ಇಷ್ಟೊಂದು ಹಣಕ್ಕೆ ಏನೇನು ಕೆಲಸ ಮಾಡದ್ದೇನೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿದ್ದೇನೆ. ನಾನು ಏನೇನು ಕೆಲಸ ಮಾಡಿದ್ದೇನೆ ಎನ್ನುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ದಾಖಲೆಗಳನ್ನು ಪಡೆದುಕೊಂಡಿದ್ದೇನೆ. ನಾನು 2011 ರಿಂದ 2012 ರವರೆಗೆ ಸಿವಿಲ್ ಕೆಲಸಗಳನ್ನು ಮಾಡಿದ್ದೇನೆ. ಸಿವಿಲ್ ಕೆಲಸ ಎಂದರೆ ರಸ್ತೆಗೆ ಟಾರ್ ಹಾಕುವುದು, ಮೆಟ್ಲಿಂಗ್ ಹಾಕುವುದು, ಮಣ್ಣು ಹಾಕುವುದು, ಹೊಸದಾಗಿ ಟಾರ್ ರಸ್ತೆ ಮಾಡುವ ಕೆಲಸಗಳಾಗಿರುತ್ತವೆ. ಆ ರೀತಿ ನನಗೆ 9 ಕೆಲಸಗಳನ್ನು ಕೊಟ್ಟಿದ್ದರು. ಪ್ರತಿಯೊಂದು ಕೆಲಸಕ್ಕೂ ಟೆಂಡರ್ ಕರೆಯುತ್ತಾರೆ ಎಂದರೆ ಸಾಕ್ಷಿಯು ಮ್ಯಾನುವಲ್ ಟೆಂಡರ್ ಆಗಿದೆ ಎಂದು ನುಡಿಯುತ್ತಾರೆ. ಟೆಂಡರ್ ಕರೆದ ನಂತರ ಬಿಡ್ ಹಣವನ್ನು ಡಿ.ಡಿ ಮತ್ತು ಬ್ಯಾಂಕ್ ಗ್ಯಾರಂಟಿ ಮುಖಾಂತರ ನಾನು ಕಳುಹಿಸಿದ್ದೆ. ಪ್ರತಿಯೊಂದು ಟೆಂಡರ್‌ಗೂ ಪ್ರತ್ಯೇಕವಾಗಿ ಡಿ.ಡಿ ಕೊಡಬೇಕು ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಯಾವ ಯಾವ ಟೆಂಡರ್‌ಗೆ ಎಷ್ಟೆಷ್ಟು ಮೊತ್ತದ ಡಿ.ಡಿ ಮತ್ತು ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದೇನೆ

ಎಂದರೆ ಸಾಕ್ಷಿಯು ಆ ಕೆಲಸದ ಮೊತ್ತದ ಮೇಲೆ ಅದು ನಿರ್ಧರಿತವಾಗುವುದ್ದಾಗಿದ್ದು ನಾನು ಪ್ರತ್ಯೇಕ ಡಿ.ಡಿ ಅಥವಾ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ಪ್ರತ್ಯೇಕವಾಗಿ ಡಿ.ಡಿ ಅಥವಾ ಬ್ಯಾಂಕ್ ಗ್ಯಾರಂಟಿ ಕೊಟ್ಟಿಲ್ಲ ಹಾಗೂ ಎಲ್ಲಾ ಕೆಲಸಗಳಿಗು ಸೇರಿ ಒಂದೇ ಡಿ.ಡಿ ಅಥವಾ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಕಾರಣ ಸರ್ಕಾರ ನನಗೆ 9 ಕೆಲಸಗಳನ್ನು ನಿಗದಿ ಮಾಡಿರಲಿಲ್ಲ ಎಂದರೆ ಮಾಡಿತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಪ್ರತ್ಯೇಕವಾಗಿ ಡಿ.ಡಿ ಅಥವಾ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರೆ ಪ್ರತಿಯೊಂದು ಕೆಲಸಕ್ಕೂ ಪ್ರತ್ಯೇಕ work order ಕೊಡುತ್ತಾರೆ ಎಂದರೆ ಸರಿ. ಈ ರೀತಿ ನಾನು 9 ಕೆಲಸಕ್ಕೂ ನನಗೆ ಕೊಟ್ಟಿದೆ ಎಂದು ಹೇಳಲಾಗುವ 9 work order ಅನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಒಂದು work order ಕೊಟ್ಟ ನಂತರ ಆ ಒಂದು ಕೆಲಸವನ್ನು ನಿಗದಿತ ಅವಧಿಯೊಳಗೆ ಮಾಡಿ ಮುಗಿಸಬೇಕು ಎಂದು ನಿಯಮವಿದೆ ಎಂದರೆ ಸರಿ. ನನಗೆ ಕೊಟ್ಟಂತಹ ಕೆಲಸವನ್ನು ನಿಗದಿತ ಅವಧಿಯೊಳಗೆ ಮುಗಿಸಿದ್ದೆ. ನಿಗದಿತ ಅವಧಿಯೊಳಗೆ ಕೆಲಸ ಮುಗಿಸಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ನಾನು ಮಾಡಿದಂತಹ ಕೆಲಸದ ಗುಣಮಟ್ಟ ಅಂದರೆ ಯಾವ ಗುಣಮಟ್ಟದ ವಸ್ತುಗಳನ್ನು ಬಳಸಿದ್ದೇನೆ ಹಾಗೂ ಆ ಕೆಲಸ ಪೂರ್ಣಗೊಂಡಿದೆಯಾ ಎಂದು ಪರಿಶೀಲಿಸುತ್ತಾರೆ ಎಂದರೆ ಸರಿ. ಆ ರೀತಿ ನಾನು ಮಾಡಿದ್ದೇನೆ ಎಂದು ಹೇಳುವ 9 ಕೆಲಸಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರಾ ಎಂದರೆ ಮಾಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಆ ರೀತಿ ಪರಿಶೀಲನೆ ಮಾಡಿದ ನಂತರ ಅಧಿಕಾರಿಗಳು ಪ್ರತಿಯೊಂದು

ದಿನಾಂಕ : 08.10.2021 ಓ.ಎಸ್ ನಂ.122/2017 ರಲ್ಲಿ
ಪಿ.ಡಬ್ಲ್ಯೂ-1(ಜಿ.ಎಲ್.ಆಂಜನೇಯ)

ಕಾಮಗಾರಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ವರದಿ ತಯಾರಿಸುತ್ತಾರೆ ಎಂದರೆ ಕ್ವಾಲಿಟಿ ರಿಪೋರ್ಟ್ ಕೊಡುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಕೆಲಸಕ್ಕೆ ಸಂಬಂಧಪಟ್ಟಂತೆ ಕ್ವಾಲಿಟಿ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಕ್ವಾಲಿಟಿ ರಿಪೋರ್ಟ್ ಕೊಟ್ಟ ನಂತರ ಸಂಬಂಧಪಟ್ಟ ಇಲಾಖೆಗೆ ನಾನು ನನಗೆ ಕೊಡಬೇಕಾದಂತಹ ಅಂದರೆ ಕಾಮಗಾರಿಗೆ ನಿಗದಿ ಮಾಡಿದ ಹಣವನ್ನು ನನಗೆ ಬಿಡುಗಡೆ ಮಾಡಿ ಎಂದು ನಾನು ಅರ್ಜಿ ಕೊಟ್ಟಿದ್ದೆ. ಸಾಕ್ಷಿಯು ಸ್ವತಃ ಬಿಲ್ ತಯಾರಿಸಿದ ನಂತರ ಅರ್ಜಿ ಕೊಡಬೇಕು ಎಂದು ನುಡಿಯುತ್ತಾರೆ. ಆ ರೀತಿ ಸರ್ಕಾರದವರು ಬಿಲ್ ತಯಾರಿಸಿದ್ದರು. 2012 ರಲ್ಲಿ ಬಿಲ್ ತಯಾರಾಗಿತ್ತು. 2012 ರಿಂದ ಈ ದಾವೆ ಸಲ್ಲಿಸುವವರೆಗಿನ ಅವಧಿಯಲ್ಲಿ ನಾನು ನನಗೆ ಹಣವನ್ನು ಬಿಡುಗಡೆ ಮಾಡುವಂತೆ ಅರ್ಜಿ ಸಲ್ಲಿಸಿದ್ದೆ. ನಾನು ಹೇಳಿದ ರೀತಿ ನಾನು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಬಾಗೇಪಲ್ಲಿ ಹಲಗೂರು ರಸ್ತೆ, ಕುದೂರು ಮೋಟಗಾನಹಳ್ಳಿ ರಸ್ತೆಯಂತಹ ಕಾಮಗಾರಿಗಳನ್ನು ನಾನು ಪೂರೈಸಿದ್ದೇನೆ. ಈ ರಸ್ತೆಗಳ ಕಾಮಗಾರಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಟೆಂಡರ್ ಕರೆದಿರಲಿಲ್ಲ ಎಂದರೆ ಕರೆದಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ. ಈ ಕಾಮಗಾರಿಗಳಿಗೆ ಸಂಬಂಧಪಟ್ಟ ಟೆಂಡರ್ ಕರೆಯದಿದ್ದರೂ ಇಲಾಖಾ ಸಿಬ್ಬಂದಿಗಳ ಜೊತೆ ನಾನು ಶಾಮೀಲಾಗಿ ಟೆಂಡರ್ ಅರ್ಜಿ ಮತ್ತು ಕಾಮಗಾರಿಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ 54,99,036/- ರೂಪಾಯಿ ಮೌಲ್ಯದ ಕಾಮಗಾರಿ ಮಾತ್ರ ಮಂಜೂರಾಗಿತ್ತು ಎಂದರೆ ಸರಿಯಲ್ಲ. 54,99,036/- ರೂಪಾಯಿ ಮೌಲ್ಯದ ಕಾಮಗಾರಿಯಲ್ಲದೇ

ಬೇರೆ ಕಾಮಗಾರಿ ನನಗೆ ಮಂಜೂರಾಗದ ಕಾರಣ ನನಗೆ 54,99,036/- ರೂಪಾಯಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಮಾಡಿದ್ದೇನೆ ಎಂದು ಹೇಳುವ ಕಾಮಗಾರಿ ಕಳಪೆ ಗುಣಮಟ್ಟದ ವಸ್ತುಗಳನ್ನು ಬಳಸಿ ಮಾಡಿದ್ದಾಗಿದ್ದು ಹಾಗೂ ಒಂದೇ ಕಾಮಗಾರಿಯನ್ನು ಎರಡೆರಡು ಸ್ಥಳಗಳಲ್ಲಿ ಮಾಡಿದ್ದೇನೆ ಎಂದು ತೋರಿಸಿ ನಾನು ಹಣ ಕೇಳಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು ಇತರ ಗುತ್ತಿಗೆದಾರರು ಸೇರಿ ಅವ್ಯವಹಾರ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನನ್ನು ಸೇರಿ ಸುಮಾರು 33 ಜನ ಗುತ್ತಿಗೆದಾರರ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಕಳಪೆ ಕಾಮಗಾರಿ ಮಾಡಿದ್ದೇನೆ ಹಾಗೂ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ್ದೇನೆ ಎಂಬ ಕಾರಣಕ್ಕೆ ಎಂದು ನನ್ನ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣದಲ್ಲಿ ನಾನು ಹಾಜರಾಗುತ್ತಿದ್ದೇನೆ ಎಂದರೆ ಸರಿ. ಕಾರಣ ನಾನು ಕೇಳುವಂತಹ 1,19,73,446/- ರೂಪಾಯಿಯನ್ನು ಪ್ರತಿವಾದಿಗಳು ಕೊಡಲಾಗುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 01.06.2012 ರಂದು ಯಾವುದೇ ಟೆಂಡರ್ ಕರೆಯದೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳ ನಿರ್ದೇಶನದ ಮೇರೆಗೆ ಲೋಕೋಪಯೋಗಿ ಇಲಾಖೆಗೆ ನಿರ್ದೇಶನ ಕೊಟ್ಟು ಅವರ ಮೂಲಕ ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಿಸಲು ಹೇಳಿದ್ದರು ಎಂದರೆ ಸರಿಯಲ್ಲ. ಈ ಸಂಬಂಧ ಇ-ಟೆಂಡರ್ ಕರೆದಿರಲಿಲ್ಲ ಎಂದರೆ

ಸಾಕ್ಷಿಯು ಮ್ಯಾನುವಲ್ ಟೆಂಡರ್ ಕರೆದಿದ್ದರು ಎಂದು ನುಡಿಯುತ್ತಾರೆ. ಹೀಗೆ ನಿರ್ವಹಿಸಿದ ಕಾಮಗಾರಿಗೆ ಸಂಬಂಧಪಟ್ಟ ಕರೆದ ಟೆಂಡರ್‌ನಲ್ಲಿ ಯಾವುದೇ ಪಾರದರ್ಶಕತೆ ಇರಲಿಲ್ಲ ಎಂದು ಚೀಫ್ ಇಂಜಿನೀಯರ್‌ರವರು ಪ್ರಾಥಮಿಕ ವರದಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಹಣ ಮುಂದಿನ ಆದೇಶದವರೆಗೆ ಬಿಡುಗಡೆ ಮಾಡಬೇಡಿ ಎಂದು ಬೆಂಗಳೂರು ಲೋಕೋಪಯೋಗಿ ಇಲಾಖೆಯ ಸೂಪರಿಡೆಂಟ್ ಆದ ಮೋಹನ್‌ರವರು ಆದೇಶಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಗುತ್ತಿಗೆದಾರರು ಪಾಲಿಸಬೇಕಾದಂತಹ ನಿಯಮಗಳನ್ನು ಪಾಲಿಸಿಲ್ಲ ಹಾಗೂ ಶ್ರೇಷ್ಠ ಗುಣಮಟ್ಟದ ವಸ್ತುಗಳನ್ನು ಬಳಸಿಲ್ಲ ಹಾಗೂ ಇಲಾಖೆ ಸೂಚಿಸಿದ ರೀತಿಯಲ್ಲಿ ಕಾಮಗಾರಿ ಮಾಡಿಲ್ಲ ಎಂದು ಬೆಂಗಳೂರು ಲೋಕೋಪಯೋಗಿ ಇಲಾಖೆಯ ಸೂಪರಿಡೆಂಟ್ ಆದ ಮೋಹನ್‌ರವರು ವರದಿ ಸಲ್ಲಿಸಿದ್ದರು ಎಂದರೆ ನಾನು ನಿಯಮಗಳನ್ನು ಪಾಲಿಸಿದ್ದೆ ಎಂದು ಸಾಕ್ಷಿಯು ನುಡಿಯುತ್ತಾರೆ. ರೂಪಾಯಿ 22,61,000/- ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಬಂಧಪಟ್ಟಂತೆ ಹಾಗೂ 2,82,000/- ರೂಪಾಯಿ ರಾಜ್ಯ ರಸ್ತೆಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರರಿಂದ ವಸೂಲು ಮಾಡಬೇಕೆಂದು ಬೆಂಗಳೂರು ಲೋಕೋಪಯೋಗಿ ಇಲಾಖೆಯ ಸೂಪರಿಡೆಂಟ್ ಆದ ಮೋಹನ್‌ರವರು ವರದಿ ಸಲ್ಲಿಸಿದ್ದು ಆ ವರದಿ ನನಗೂ ಅನ್ವಯವಾಗುತ್ತದೆ ಎಂದರೆ ನನಗೆ ಗೊತ್ತೇ ಇಲ್ಲ, ನೋಟಿಸ್ ಕೊಟ್ಟಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನೊಂದಿಗೆ ಕೈ ಜೋಡಿಸಿದಂತಹ ಇಲಾಖಾ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಅಮಾನತುಗೊಂಡಿದ್ದರು ಎಂದರೆ ನನ್ನೊಂದಿಗೆ ಯಾರೂ ಕೈಜೋಡಿಸಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ರೀತಿಯ ಪ್ರಾಥಮಿಕ ವರದಿ

ಮತ್ತು ಆದೇಶವಿದ್ದ ಕಾರಣ ಯಾವುದೇ ಹಣವನ್ನು ನನಗೆ ಬಿಡುಗಡೆ ಮಾಡಬಾರದೆಂದು ಸರ್ಕಾರ ಆದೇಶಿಸಿತ್ತು ಎಂದರೆ ಸಾಕ್ಷಿಯು ನಾನು ಗುಣಮಟ್ಟದ ಕೆಲಸ ಮಾಡಿದ್ದು ನನಗೆ ಹಣ ಬಿಡುಗಡೆ ಮಾಡಬೇಕೆಂದು ನುಡಿಯುತ್ತಾರೆ.

ಸರ್ಕಾರದ ನಿರ್ದೇಶನದ ಮೇರೆಗೆ ರಸ್ತೆ ಗುಣಮಟ್ಟವನ್ನು ಪರಿಶೀಲಿಸಬೇಕೆಂದು 4 ನೇ ಪ್ರತಿವಾದಿಯವರು ದಿನಾಂಕ 16.02.2016 ರ ಪತ್ರದ ಮುಖೇನ ಕ್ವಾಲಿಟಿ ಅಶ್ಯೂರೆನ್ಸ್ ಅಥಾರಿಟಿಯವರನ್ನು ಕೋರಿಕೊಂಡಿದ್ದರು ಎಂದರೆ ಸರಿ. ಸದರಿ ಪತ್ರದನ್ವಯ Assistant Executive Engineer/Quality Assurance Bengaluru ಇವರು ನನ್ನೊಂದಿಗೆ ಜಂಟಿ ತನಿಖೆ ಮಾಡಿ 02.04.2016 ದಿನಾಂಕದಂದು ವರದಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನನಗೆ ನೋಟಿಸ್ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ವರದಿಯ ಪ್ರಕಾರ ನಾನು ಕಾಮಗಾರಿ ನಡೆಸುವ ಸಮಯದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಪಾಲಿಸಿರಲಿಲ್ಲ ಮತ್ತು ಕಾಮಗಾರಿ ಪೂರ್ಣಗೊಳಿಸಿದ ಸ್ಥಳಗಳನ್ನು ತೋರಿಸಿರಲಿಲ್ಲ ಎಂದರೆ ಸಾಕ್ಷಿಯು ನಾನು ಗುಣಮಟ್ಟದ ಕೆಲಸ ಮಾಡಿದ್ದೆ ಹಾಗೂ ಅವರು ಬರುವುದು ಹೋಗುವುದು ಗೊತ್ತಿರಲಿಲ್ಲ, ನನಗೆ ನೋಟಿಸ್ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಎಲ್ಲೆಲ್ಲಿ ಕೆಲಸ ಮಾಡಿದ್ದೆ ಎಂದು ಸಂಬಂಧಪಟ್ಟ ಇಲಾಖೆಗಳಿಗೆ 2013 ರಲ್ಲೇ ತೋರಿಸಿದ್ದೆ. ಸ್ಥಳ ಪರಿಶೀಲನೆ ಮಾಡಿದ ನಿಯೋಗಿಯವರು ನಾನು ಕಳಪೆ ಗುಣಮಟ್ಟದ ಕೆಲಸ ಮಾಡಿದ್ದು ಪಾಲಿಸಬೇಕಾದ ನಿಯಮಗಳನ್ನು ಪಾಲಿಸಿರಲಿಲ್ಲ ಎಂದು ವರದಿ ಸಲ್ಲಿಸಿದ್ದರು ಎಂದರೆ ಸುಳ್ಳು ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಕಳಪೆ ಗುಣಮಟ್ಟದ ಕೆಲಸ ಮಾಡಿದ್ದೇನೆ ಎಂದು ವರದಿ ಸಲ್ಲಿಸಿದ್ದು ಕಾರಣ ನನಗೆ ಹಣ

ದಿನಾಂಕ : 08.10.2021 ಓ.ಎಸ್ ನಂ.122/2017 ರಲ್ಲಿ
ಪಿ.ಡಬ್ಲ್ಯೂ-1(ಜಿ.ಎಲ್.ಆಂಜನೇಯ)

ಬಿಡುಗಡೆ ಮಾಡಬಾರದೆಂದು ಹೇಳಿದ್ದು, ನಾನು ಸಂಬಂಧಪಟ್ಟ ಅಧಿಕಾರಿಗಳು ನನಗೆ ಹಣ ಬಿಡುಗಡೆ ಮಾಡಲು ಲಂಚ ಕೇಳುತ್ತಿದ್ದಾರೆ ಎಂದು ಸುಳ್ಳು ಕಾರಣ ನೀಡಿ ನಾನು ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಸುಳ್ಳು ಡಬ್ಲ್ಯೂ.ಪಿ ನಂ.30969/2014 ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ನಾನು ಗುಣಮಟ್ಟದ ಕೆಲಸ ಮಾಡಿದ್ದು ರಿಟ್ ಅರ್ಜಿ ಸಲ್ಲಿಸಿದ್ದು ನಿಜ ಎಂದು ನುಡಿಯುತ್ತಾರೆ. ನಾನು ಯಾವುದೇ ಕಾಮಗಾರಿ ಮಾಡಿಲ್ಲ ಹಾಗೂ ಪ್ರತಿವಾದಿಗಳು ನನಗೆ ನಾನು ಈ ದಾವೆಯಲ್ಲಿ ಕೇಳಿದಂತಹ ಹಣವನ್ನು ಕೊಡಬೇಕಾಗಿಲ್ಲ ಮತ್ತು ನನಗೆ ಯಾವುದೇ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿಸಿ ಈ ಸುಳ್ಳು ದಾವೆ ಸಲ್ಲಿಸಿ ಹಣಗಳಿಸುವ ಉದ್ದೇಶದಿಂದ ಸರ್ಕಾರಕ್ಕೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ನನ್ನ ಪ್ರಮಾಣಪತ್ರಗಳು ಪೂರ್ತಿ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
C/c ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ.,
ರಾಮನಗರ.